ಶ್ರೀ ಎಸ್. ಗೋಪಾಲಗೌಡರು.—ಈಗ ಹೊನ್ನೆಮರಡು ಯೋಜನೆ ನಿಂತಿರುವುದರಿಂದ ಹಿರೇಭಾಸ್ಕರ್ ಅಣೆಕಟ್ಟು ಪೂರ್ತಿಯಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

Sri T. SIDDALINGAIYA.—It is obvious.

ಶ್ರೀ ಎಸ್. ಗೋಪಾಲಗೌಡರು.—ಹೊನ್ನೆಮರಡು ಅಣೆಕಟ್ಟು ಕಟ್ಟಿರುವುದು ಬರೀ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೆ ಮಾತ್ರ ಅಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಿರುವ ಉದ್ದೇಶ ಅದು.

ಶ್ರೀ ಎಸ್. ಗೋಪಾಲಗೌಡರು.—ಅನಂತರದಲ್ಲಿ ನೀರಾವರಿ ಕಾಮಗಾರಿಗಳಿಗೆ ನೀರನ್ನೊದಗಿಸಲು ಸಾಧ್ಯವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಯೋಜನೆಗೆ ಎಷ್ಟು ಕೋಟಿ ರೂಪಾಯಿಗಳಾಗುತ್ತವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 25 ಕೋಟಿ ರೂಪಾಯಿಗಳೆಂದು ಈಗ ಅಂದಾಜಾಗಿದೆ ; 35 ಕೋಟಿಯವರೆಗೂ ಹೋಗಬಹುದು.

ಶ್ರೀ ಎಸ್. ಗೋಪಾಲಗೌಡರು.—ಈಗ ಅಲ್ಲಿ ಸರ್ವೆ ನಡೆದಿದೆಯಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಎಸ್. ಗೋಪಾಲಗೌಡರು.—ಎಷ್ಟು ಕಾಲದಲ್ಲಿ ಮುಗಿಯಬಹುದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವರ್ಷದೊಳಗೆ ಮುಗಿಯುತ್ತದೆ. ನಮಗೆ ಹಣ ದೊರಕಿದ್ದರೆ ಇನ್ನೂ ಜಾಗ್ರತೆ ಮಾಡುತ್ತಿದ್ದೆವು.

ಶ್ರೀ ಎಸ್. ಗೋಪಾಲಗೌಡರು.—ಸರ್ವೆ ಮುಗಿದ ನಂತರ ಕೆಲಸವಾಗುತ್ತದೆಯೆಂದು ಭಾವಿಸಬಹುದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಂದೇಹವಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಅಣೆಕಟ್ಟಿನ ಸಂಬಂಧದಲ್ಲಿ ಶಿವಮೊಗ್ಗದ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮುಂತಾದ ಕೆಲವು ಪ್ರಮುಖರು ಕೊಟ್ಟ ಸಲಹೆಯನ್ನು ಸರ್ಕಾರ ಗಮನಿಸಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗಮನಿಸಿದೆ.

ಶ್ರೀ ಎಸ್. ಗೋಪಾಲಗೌಡರು.—ಆ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇನ್ನೂ ಯೋಚನೆ ಮಾಡಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಹಣವಿಲ್ಲದಿರುವುದರಿಂದ ಮತ್ತು ಸದ್ಯಕ್ಕೆ ಹಿರೇಭಾಸ್ಕರ್ ಅಣೆಕಟ್ಟಿನಿಂದ ಸಾಕಷ್ಟು ನೀರು ಒದಗುತ್ತಿರುವುದರಿಂದ ಈ ಅಣೆಕಟ್ಟಿನ ಯೋಜನೆ ಮುಂದುವರಿಯಲಲ್ಲ ಅಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಣ ಒದಗದೇ ಇರುವುದರಿಂದ ಮುಂದಕ್ಕೆ ಹೋಗುತ್ತಿದೆ. ಇದರಲ್ಲಿ ಏನೂ ಸಂದೇಹವೇ ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದೊಡನೆ ಏನಾದರೂ ಮಾತುಕತೆ ನಡೆದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಚಿತವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಅಂತೂ ಮಾತುಕತೆ ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡರು.—ಈ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಮುಂದಾದರೂ ಸರ್ಕಾರ ಇದಕ್ಕೆ ಪ್ರಯತ್ನಮಾಡುತ್ತದೆಯೆ ?

9 A.M.

Sri T. SIDDALINGAIYA.—We shall do our best. We are doing our best even now.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಅದಕ್ಕೆ ಇನ್ನಾವುದಾದರೂ ಆಲ್ಟರ್‌ನೇಟ್ ಪ್ರಪೋಸಲ್ ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋ ಚೇಂಜ್.

ಶ್ರೀ ಎಚ್. ಎಸ್. ರುದ್ರಪ್ಪನವರು.—ತಾವು ಈ ಜಮೀನು ಮುಳುಗಡೆ ಆಗತಕ್ಕವರಿಗೆ ಒಂದು ಅಥವಾ ಎರಡು ವರ್ಷಗಳ ಕಾಲಾವಕಾಶ ಕೊಡುತ್ತೇವೆಯೆಂದು ಹೇಳಿದ್ದೀರಿ ಆ ರೀತಿ ಎಷ್ಟು ಜನರ ಜಮೀನು ಮುಳುಗಡೆಯಾಗುತ್ತದೆಯೆಂಬ ಲೆಕ್ಕವಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೇಳುವುದಕ್ಕಾಗುವುದಿಲ್ಲ.

Supply of Electricity to Vedavathi Basin.

Q.—233. Sri V. MASIYAPPA (Hiriyur).—

Will the Government be pleased to state :—

(*a*) whether the estimate for supplying electricity to the Vedavati basin has been sanctioned ; if so, when ; and why it has not been given effect to ;

(*b*) whether the raiyats under Vanivilas Sagar atchkat have not given mutchalikas binding themselves to take power ?

A.—Sri T. SIDDALINGAIYA (Minister for Industries).—

(*a*) Five Major estimates amounting to Rs. 31,78,000 were prepared for power supply to 729 Irrigation Pumping sets in Vedavati Basin in Chitaldrug. Of these one of the estimates for Rs. 13 lakhs for power supply to 298 Irrigation Pumping Sets was sanctioned by Government on 19th April 1951. The work is in progress and more than 50 per cent of the work has been completed already.

(*b*) Yes.

ಶ್ರೀ ಎ. ಮಸಿಯಪ್ಪನವರು.—(a) ಪ್ರಶ್ನೆಗೆ ಉತ್ತರವಾಗಿ 5 ಮೇಜರ್ ಅಂದಾಜುಗಳನ್ನು ತಯಾರಿಸಲಾಯಿತು ಎಂದು ಹೇಳಿದ್ದೀರಿ. ಆ ಅಂದಾಜುಗಳು ಯಾವ ಯಾವವು ಎಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಮಸಿಯಪ್ಪನವರು.—ಕೆಲಸ ಮುಂದುವರಿಯುತ್ತಾ ಇದೆ ಎಂದು ಹೇಳಿದ್ದೀರಿ. ಯಾವ ಕಡೆಯಿಂದ ಕೆಲಸ ಪ್ರಾರಂಭ ಮಾಡೋಣಾಯಿತು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವೇದಾವತಿ ಬೇಸ್ಕಿನ್‌ನಲ್ಲಿ ಮಾಡಿರತಕ್ಕ 5 ಅಂದಾಜುಗಳಲ್ಲಿ ಒಂದನ್ನು ತೆಗೆದುಕೊಂಡಿದೆ. ಅದಕ್ಕೆ 13 ಲಕ್ಷ ರೂಪಾಯಿಗಳು ಮಂಜೂರಾಗಿವೆ. ಮತ್ತು 298 ಇರಿಗೇಷನ್ ಪಂಪುಗಳಿಗೂ ಕೂಡ ಮಂಜೂರಾಗಿದೆ. ಕೆಲಸ ನಡೆಯುತ್ತಾ ಇದೆ.

ಶ್ರೀ ಎ. ಮಸಿಯಪ್ಪನವರು.—ಅದರಲ್ಲಿ ಯಾವ ಕಡೆಯಿಂದ ಕೆಲಸ ಪ್ರಾರಂಭವಾಗಿದೆ ಎಂದು ನನ್ನ ಪ್ರಶ್ನೆ:

ಶ್ರೀ ಟಿ. ಸಿದ್ದಲಿಂಗಯ್ಯನವರು.—ವಿವರ ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ನಡೆಯುತ್ತಾ ಇರತಕ್ಕ ಕೆಲಸ 13 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ನಡೆಯುತ್ತಾ ಇದೆ.

ಶ್ರೀ ಎ. ಮಸಿಯಪ್ಪನವರು.—ಹಾಗಾದರೆ.....

Mr. SPEAKER.—The Hon'ble Minister need not answer.

ಶ್ರೀ ಎ. ಮಸಿಯಪ್ಪನವರು.—ಹಿರಿಯೂರು ಕಡೆಯಿಂದ ಕೆಲಸ ಪ್ರಾರಂಭವಾಗಿದೆಯೇ ಅಥವಾ ಬೇರೆ ಕಡೆಯಿಂದ ಪ್ರಾರಂಭವಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಮಸಿಯಪ್ಪನವರು.—ಹಿರಿಯೂರಿನಲ್ಲಿ 8 ಪಂಪುಗಳಿಗೆ 2 ಲಕ್ಷ 80 ಸಾವಿರ ರೂಪಾಯಿಗಳು ಮಂಜೂರಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—298 ಇರಿಗೇಷನ್ ಪಂಪುಗಳು ಮತ್ತು 13 ಲಕ್ಷ ರೂಪಾಯಿಗಳ ಒಂದು ಅಂದಾಜು ಮಾತ್ರ ಮಂಜೂರಾಗಿದೆ. ವಿಕ್ಕಿದ್ದು ಆಗಿಲ್ಲ.

ಶ್ರೀ ಎ. ಮಸಿಯಪ್ಪನವರು.—ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಆರೀತಿ ಮುಚ್ಚಳಿಕೆ ಬರೆದುಕೊಟ್ಟರೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—13 ಲಕ್ಷ ರೂಪಾಯಿಗಳಿಗೆ ಎಷ್ಟು ಎಕರೆ ತರೀ ಜಮೀನು ಆಗುತ್ತದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು.—ಗೊತ್ತಿಲ್ಲವೇ ?

Mr. SPEAKER.—The Hon'ble Minister requires notice.

Industrial School at Chikmagalur.

Q.—440. **Srimathi B. L. SUBBAMMA** (Chikmagalur-Mudigere).—

Will the Government be pleased to state :—

When the Industrial School at Chikmagalur was started ?

A.—**Sri T. SIDDALINGAIYA** (Minister for Industries).—

It was started under a scheme sanctioned in 1915 for the organisation of industrial schools in the State, and was transferred from the control of the Education Department to that of the Industries and Commerce Department in 1922.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—1922 ನೆಯ ಇಸವಿಯಲ್ಲಿ ಈ ಪಾಠಶಾಲೆಯ ಮೇಲಿನ ಹತೋಟಿಯನ್ನು ವಿದ್ಯಾಭ್ಯಾಸದ ಇಲಾಖೆಯಿಂದ ವಾಣಿಜ್ಯದ ಇಲಾಖೆಗೆ ವರ್ಗಾಯಿಸಲಾಯಿತು ಎಂದು ಹೇಳಿದ್ದೀರಿ. ಈಗ ಬದಲಾವಣೆ ಆಗಿರುವುದು ಏನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಒಂದು ಹೊಸ ನೆಕ್ಷನ್ ಓಪನ್‌ಮಾಡಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಪಾಠಶಾಲೆ ಪ್ರಾರಂಭವಾಗಿ 37 ವರ್ಷವಾದರೂ ಕಟ್ಟಡ ಇಲ್ಲದೇ ಇರುವುದಕ್ಕೆ ಕಾರಣವೇನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಿಂದೆ ಏನು ಕಾರಣ ಇತ್ತೋ ನಮಗೆ ಗೊತ್ತಿಲ್ಲ. ಈಗ ಯಾರೋ ಧರ್ಮಾತ್ಮರು ಕಟ್ಟಡ ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಧರ್ಮಾತ್ಮರು ಕೊಟ್ಟ ಕಟ್ಟಡದಲ್ಲಿ ಸ್ಕೂಲು ನಡೆಯುತ್ತ ಇಲ್ಲ; ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂಬುದು ಗೊತ್ತೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿದೆ. ಅದನ್ನು ಬೇಗ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಈ ಸ್ಕೂಲಿನಲ್ಲಿ ಸರಿಯಾದ ಉಪಕರಣಗಳು ಇಲ್ಲ ಎಂಬುದು ಗೊತ್ತೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸ್ಕೂಲುಗಳಿಗೆ ಬೇಕಾಗತಕ್ಕ ಉಪಕರಣಗಳನ್ನು ಸಾಧ್ಯವಾದಷ್ಟೂ ಇದುವರೆಗೂ ಒದಗಿಸಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹಾಸನದ ಕೈಗಾರಿಕಾ ಸ್ಕೂಲನಲ್ಲಿರತಕ್ಕ ಅನೇಕ ಉಪಕರಣಗಳನ್ನು ಬೇರೆ ಕಡೆಗೆ ವರ್ಗಾಯಿಸಿದ್ದಾರೆ ಎಂಬುದು ಗೊತ್ತಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹೀಗೆ ಈ ಸ್ಕೂಲಿನ ವಿಚಾರದಲ್ಲಿ ನಿಗಾ ಕೊಡದೇ ಇರುವುದು ತುಂಬಾ ಅನ್ಯಾಯವಲ್ಲವೇ ? ಮಹಿಳೆಯರಿಗೇ ಬೇರೆ ತರಗತಿ ತೆಗೆಯಬೇಕೆಂದು ಎಷ್ಟು ವರ್ಷದಿಂದ ಕೇಳುತ್ತ ಇದ್ದಾರೆ ?

Sri T. SIDDALINGAIYA.—That does not arise out of this question.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಕೈಗಾರಿಕಾ ಸ್ಕೂಲುಗಳ ವಿಚಾರದಲ್ಲಿ ಹೆಚ್ಚು ನಿಗಾ ತೆಗೆದು ಕೊಳ್ಳುತ್ತಿಲ್ಲ ಎಂದು ನಂಬಬಹುದೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವಾಗಲೂ ನಿಗಾ ತೆಗೆದುಕೊಳ್ಳುವುದೇ ಸರ್ಕಾರದ ಕರ್ತವ್ಯ.